ಡೈರಿ ವಿಶ್ವನಾಥ್, ಬೆಂಗಳೂರು

ಯಾರ ಹತ್ತಿರ ಗುಟ್ಟು ಹೇಳುವುದು ಉತ್ತಮ?



ವೈರಿಯ ಹತ್ತಿರ. ಅವನು ಅದು ಸುಳ್ಳೆಂದುಕೊಂಡು ಹರಡದೆ ಇದ್ದುಬಿಡುತ್ತಾನೆ.

ಪಿ. ಶಂಕರಪ್ಪ, ಶಿವಮೊಗ್ಗ

ಈಗೀಗ ಮಠಾಧೀಶರು ರಾಜಕೀಯ ವ್ಯವಹಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಲು ನಿಖರವಾದ ಕಾರಣವೇನು?

ರಾಣಿಜೇನನ್ನು ಹಿಡಿದರೆ ಇಡೀ ಜೇನುಗೂಡೇ ತಮ್ಮದಾಗುತ್ತದೆ ಎಂಬ ತಿಳಿವಳಿಕೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಹನುಮಂತನಿಗೆ ಬಾಲ ಇರುವುದೇತಕ್ಕೆ ಸರ್?

ರಾವಣನ ಆಸ್ಥಾನದಲ್ಲಿ ಮಾಡಿದಂತೆ ಬೇಕೆಂದ ಕಡೆ ಕುಳಿತುಕೊಳ್ಳಲು ಸ್ಟೂಲ್ ಆಗಿ ಬಳಸಲು.

ಎ.ಕೆ. ಪಟ್ಟಾಭಿ, ಬೆಂಗಳೂರು

ಗಂಟು ನೋಡುವ ಜನಕ್ಕೂ, ನಿಘಂಟು ನೋಡುವ ಜನಕ್ಕೂ ವ್ಯತ್ಯಾಸವೇನು?



ನಿಘಂಟು ಅರ್ಥಕ್ಕೆ ಸೀಮಿತ; ಗಂಟು ಅನರ್ಥಕ್ಕೂ ಆಗಬಹುದು.

ರತ್ನಜ, ಮೈಸೂರು

ಮರ ಕಡಿದು, ಅದರಲ್ಲಿ ಪೇಪರ್ ತಯಾರಿಸಿ, ಅದರ ಮೇಲೆ ಮರ ಕಡಿಯಬೇಡಿ ಎಂದು ಬರೆಯುವವನಿಗೆ ಏನೆನ್ನುವಿರಿ ರಾಮ್?

ತಾನು ಕೆಟ್ಟದ್ದು ಸಾಕು, ಜಗ ಕೆಡದಿರಲೆಂಬ ಕಾಳಜಿ ಉಳ್ಳವನೆಂದು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಮನುಷ್ಯನ ಬೆಲೆ ಸತ್ತ ಮೇಲೆಯೇ ಗೊತ್ತಾಗುವುದೇಕೆ?

ಡಿಪಾಸಿಟ್ಟು, ಇನ್ಶೂರೆನ್ಸು, ಸಾಲ, ಮೆಡಿಕಲ್ ಬಿಲ್ಲುಗಳ ಒಟ್ಟು ಮೊತ್ತ ಸತ್ತಮೇಲೆಯೇ ಗೊತ್ತಾಗುವುದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ರಾಜಕಾರಣಿಗಳು ತಮಗೆ ಹಾಕಿದ ಹಾರವನ್ನು ಕಾರಿಗೆ ಹಾಕುವುದೇಕೆ?

ದೇಶವನ್ನು ಹಿಂದಕ್ಕೊಯ್ಯುವ ತಮಗಿಂತ ದೇಹವನ್ನಾದರೂ ಮುಂದಕ್ಕೊಯ್ಯುವ ಕಾರೇ ವಾಸಿ ಎಂಬ ಅಂತಃಪ್ರಜ್ಞೆ.

ಬಿ.ಎನ್. ಸೊಲ್ಲಾಪುರ, ಬೀದರ

ನಾಲಾಯಕರು ಪದದಲ್ಲಿ ಲಾ ತೆಗೆದರೆ ಏನಾಗುತ್ತದೆ ಸಾರ್?

ಲಾ ಉರುಫ್ ಕಾನೂನು ಬಿಟ್ಟವರೇ ನಾಯಕರೆಂಬ ಸತ್ಯಾಂಶ ಹೊರಬೀಳುತ್ತದೆ.

ಬಾ.ರಂ. ಸುರೇಶ, ಶಿವಮೊಗ್ಗ

ಬಟ್ಟೆಯ ಮಹತ್ವ ಇತ್ತೀಚೆಗೆ ಬಹಳ ಕಡಿಮೆ ಆಗುತ್ತಿದೆಯಲ್ಲ...?

ಖರ್ಚು ತಗ್ಗಿಸಲು ಇದು ಅನಿವಾರ್ಯವಂತೆ! ಬಟ್ಟೆ ಚಿಕ್ಕದಾದಷ್ಟೂ ಡ್ರೈಕ್ಲೀನ್ ಮತ್ತು ಇಸ್ತ್ರಿಯ ಖರ್ಚು ಕಡಿಮೆ!

ಕೆ.ಎಂ. ವಿಭೂತಿ, ಹರಿಹರ

ಸ್ವರ್ಗದಲ್ಲಿ ಮದುವೆ ನಡೆದರೂ ಕೆಲವರ ಜೀವನ ನರಕವಾಗಿರಲು ಕಾರಣವೇನು ಗುರುವೆ?

ಅತೃಪ್ತಿ ನಗರದ ಮತ್ಸರ ಬಡಾವಣೆಯ ಇಗೋ ಕಾಂಪ್ಲೆಕ್ಸ್‌ನಲ್ಲಿ ಸಂಸಾರ ಹೂಡಿದುದರಿಂದ.

ಜಿ. ಅನಂತನಾರಾಯಣಸ್ವಾಮಿ, ತುಮಕೂರು

ವಿಗ್ರಹದ ಮೇಲಿಂದ ಹೂ ಕೆಳಗೆ ಬಿದ್ದರೆ ಅದು ವರವೋ ಅಥವ ಆಯ ತಪ್ಪಿ ಬಿದ್ದುದೋ?

ಆಯ ತಪ್ಪದಿರಲೆಂದು ಬಿದ್ದುದು. ಪ್ರತಿ ದೇಗುಲದ ಆ(ದಾ)ಯ ದೊರೆಯುವ ವರಗಳ ಸಂಖ್ಯೆಯ ಮೇಲೆ ವೃದ್ಧಿಸುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು

ಮದುವೆ ಒಂದು ಅಪಘಾತ ಎನ್ನುವುದು ಸರಿಯೆ?

ಸರಿಯೇ. ಓಕುಳಿಯಾಟ ಆಡುವ ಮದುವೆಗಳಲ್ಲಿ ಅಪ ನೀರಿನ ಘಾತ ಹೊಡೆತ ಇರುತ್ತದಲ್ಲ!

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ

ಹೂವಿನ ಬಳಿ ಹೋದರೆ ಘಮಘಮ; ಹುಡುಗಿಯ ಬಳಿ ಹೋದರೆ?

ಸರಿಸರಿಸರಿ; ಸರಿಯದಿದ್ದರೆ ಧಪಧಪಧಪ.

ಹಾಡ್ಯ ಬ. ಜಯಾನಂದ, ಮೈಸೂರು

ಶ್ರೇಷ್ಠ ವ್ಯಕ್ತಿಗಳು ತಮ್ಮಲ್ಲೇ ಹುಡುಕುತ್ತಾರಂತೆ; ಸಣ್ಣ ವ್ಯಕ್ತಿಗಳು ಇತರರಲ್ಲಿ ಹುಡುಕುವರಂತೆ; ರಾಜಕಾರಣಿಗಳು?

ಅವರೇನನ್ನೂ ಹುಡುಕುವುದಿಲ್ಲ. ಚುನಾವಣೆಯಾದ ನಂತರ ಅವರೆಲ್ಲಿ ಮರೆಯಾದರೆಂದು ಇತರರು ಹುಡುಕುತ್ತಾರೆ.

ಅಂಜನಾ ನಂದಕಿಶೋರ್, ಬೆಂಗಳೂರು

ನಗೆಯರಳಿಸುವ ನಿಮ್ಮಂಥವರಿಗೆ ಖಂಡಿತ ಪುನರ್ಜನ್ಮವಿಲ್ಲ. ಆದರೂ ಮನ ಇಂತಹವರು ನೂರು ಜನ್ಮವೆತ್ತ ಬೇಕೆನ್ನುತ್ತದೆ. ಯಾವುದು ಸರಿ?

ಪ್ರತಿ ಕಾಲಘಟ್ಟದಲ್ಲಿಯೂ ನಗೆ ಚಿಮ್ಮಿಸುವವರು ನೂರಾರು ಜನರಿರಲೆಂಬ ಹಾರೈಕೆಯೇ ಸರ್ವೋತ್ತಮ.

ಕೆ.ಯಂ. ವೀರೇಶ್, ಕೂಡ್ಲಿಗಿ

ರಾಜ್ಯೋತ್ಸವದ ಬಗ್ಗೆ ನಿಮ್ಮ ಅಭಿಪ್ರಾಯವೇನು?



ಅರ್ಹರಿಗಿಂತಲೂ ಅರವತ್ತಾದವರಿಗೇ ಪ್ರಶಸ್ತಿ ಕೊಡುವ ವೈಭವದ ಏಕದಿನದ ಭಾಷಾ ಸರ್ಕಸ್.

ವ. ಉಮೇಶ ಕಾರಂತ, ಮಂಗಳೂರು

ಪುಸ್ತಕ ಓದದ ಮಸ್ತಕದಿಂದೇನು ಪ್ರಯೋಜನ?

ಅನುಭವದ ನೆನಪುಗಳ ಕೋಶವನ್ನು ಹೊಂದಿರುತ್ತದಲ್ಲ! ಹಿರಿಯರ ಸಣ್ಣ ಅನುಭವವೂ ನೂರು ಕಾದಂಬರಿಗೆ ಸಮ.